**ಕಥೆ**

# ಸಿದ್ಧಾರ್ಥ



**ಶ್ವೇತಾ ಹೊಸಬಾಳೆ**

ಕಲೆ: ವೆಂಕಟ್ರಮಣ ಭಟ್

ಸ್ಟ್ರಾಂಗ್ ಕಾಫಿ ಮಾಡಿಕೊಂಡು ಕುಡಿದ ಸೀತಾಲಕ್ಷ್ಮಿ ಮರುದಿನ ಬೆಳಗ್ಗೆಗೆ ಕಾಫಿ ಡಿಕಾಕ್ಷನ್ ಮಿಕ್ಕಿದೆ ಎಂದು ಖಾತ್ರಿಪಡಿಸಿಕೊಂಡು ಅಡುಗೆಮನೆ ಬಾಗಿಲು ಮುಚ್ಚಿ ನಡುಮನೆ, ಜಗುಲಿ ದಾಟಿ ರಸ್ತೆ ಕಾಣುತ್ತಿದ್ದ ಹೊರಗಿನ ಕಟ್ಟೆ ಮೇಲಿದ್ದ ಕಿಟಕಿಯ ಮೇಲೆ ಬಂದು ಕುಳಿತಳು. ಇದು ಅವಳ ನಿತ್ಯದ ಕಾಯಕ. ಇನ್ನು ಸಂಜೆಯಾಗುವವರೆಗೆ ರಸ್ತೆ ಮೇಲೆ ಹೋಗುವವರನ್ನು ನೋಡುತ್ತಾ ಕೂರುವುದು, ಪರಿಚಿತರು ಕಂಡರೆ ಅವರನ್ನು ಮುಂದಡಿ ಇಡಲು ಬಿಡದೆ ನಿಲ್ಲಿಸಿ ಪ್ರಶ್ನೆ ಮೇಲೆ ಪ್ರಶ್ನೆ ಕೇಳುತ್ತಾ ಮಾತಾಡಿಸುತ್ತಿದ್ದಳು. ಅವರು ಎಲ್ಲಿಗೆ ಹೋಗುತ್ತಿದ್ದಾರೆ? ಯಾಕೆ ಹೋಗುತ್ತಿದ್ದಾರೆ? ದೇವಸ್ಥಾನಕ್ಕೆ ಬಂದಿದ್ದರಾ? ಅವರ ಮನೆ ಅಳಿಯ ಮಕ್ಕಳು ಇತ್ತೀಚೆಗೆ ಏನಾದರೂ ಬೆಂಗಳೂರಿನಿಂದ ಊರಿಗೆ ಬಂದಿದ್ದರಾ? ಕೈಯ್ಯಲ್ಲಿರುವ ಚೀಲದಲ್ಲಿ ಇರುವುದೇನು? ಹೀಗೆ ಎಲ್ಲಾ ವಿವರಗಳನ್ನೂ ನಿಂತವರು ಒಪ್ಪಿಸಿಯೇ ಮುಂದಕ್ಕೆ ಸಾಗಬೇಕಾಗುತ್ತಿತ್ತು. ಹಾಗಾಗಿ ರಸ್ತೆ ಮೇಲೆ ಹೋಗುವವರು ಸ್ವಲ್ಪ ದೂರದಲ್ಲಿ ಕಿಟಕಿಯ ಮೇಲೆ ಸೀತಾಲಕ್ಷ್ಮಿಯನ್ನು ಕಂಡವರೇ ಆದಷ್ಟೂ ಕಣ್ಣುತಪ್ಪಿಸಿಕೊಂಡು ತಮ್ಮ ಪಾಡಿಗೆ ತಾವು ಹೋಗಲು ನೋಡುತ್ತಿದ್ದರು. ಇದು ಅವಳಿಗೂ ಗೊತ್ತಿರುವ ವಿಷಯವೇ. ಆದರೂ ಒಂಟಿತನದಿಂದ ಬೇಸತ್ತ ನಾಲಗೆ ಮಾತಿಗೆ ಹಾತೊರೆದು ರಸ್ತೆ ಮೇಲೆ ಹೋಗುವವರನ್ನು ನಿಲ್ಲಿಸಿ ತನಿಖೆ ಮಾಡುತ್ತಿತ್ತು. ಅಷ್ಟಾದರೆ ಅವಳಿಗೆ ಮಾತನಾಡುವ ಹಪಹಪಿ ತುಸು ಕಡಿಮೆಯಾಗಿ ಮನಸ್ಸಿಗೆ ಸಮಾಧಾನ ಎನ್ನಿಸುತ್ತಿತ್ತು. ಇವತ್ತು ಎಷ್ಟೊತ್ತು ಕುಳಿತರೂ ರಸ್ತೆ ಮೇಲೆ ಬರೀ ಬೈಕು ಕಾರುಗಳು ಬರ್‍ರಂತ ಹೋಗುತ್ತಿದ್ದವು ಬಿಟ್ಟರೆ ಒಂದು ನರಪಿಳ್ಳೆಯೂ ಹಾದುಹೋಗಲಿಲ್ಲ. ಬೇಸತ್ತ ಸೀತಾಲಕ್ಷ್ಮಿ ನಿಟ್ಟುಸಿರುಬಿಡುತ್ತಾ ಜಗುಲಿಗೆ ಬಂದು ಜಗತ್ತಿಗೂ ತನಗೂ ಸಂಪರ್ಕವನ್ನೇ ಬಂದ್ ಮಾಡುತ್ತಿದ್ದ ಹೊರಬಾಗಿಲು ಹಾಕುವುದೋ ಬಿಡುವುದೋ ಎಂದು ಒಂದು ಕ್ಷಣ ರಸ್ತೆಗೆ ಮುಖ ಮಾಡಿ ನಿಂತವಳು, ಅದೇನೋ ಯಾತನೆಯಿಂದ ನಿಧಾನವಾಗಿ ಬಾಗಿಲು ಮುಚ್ಚಿ ಒಳಬಂದು ದೇವರ ಮುಂದಿದ್ದ ದೀಪ ಹಚ್ಚಿದಳು.

ಏಳು ವರ್ಷಗಳ ಹಿಂದೆ ಗಂಡ ಚಿದಂಬರ ಭಟ್ಟರು ತೀರಿ ಹೋಗಿದ್ದೇ ಸೀತಾಲಕ್ಷ್ಮಿ ಹಳೆಯ ದೊಡ್ಡ ಮನೆಯಲ್ಲಿ ಒಂಟಿಯಾಗಿದ್ದಳು. ಇರುವ ಒಬ್ಬನೇ ಮಗ ವಿಶ್ವನಾಥ ಹತ್ತಿರದಲ್ಲೇ ಇರುವ ಪಟ್ಟಣದಲ್ಲಿ ಹೆಂಡತಿ ಮಕ್ಕಳೊಂದಿಗೆ ವಾಸವಿದ್ದ. ಅಪ್ಪ ಸತ್ತ ಎರಡು ಮೂರು ವರ್ಷಗಳ ನಂತರವಷ್ಟೇ ಆತ ತಾನೊಬ್ಬನೇ ಹದಿನೈದು ದಿನಗಳಿಗೋ ತಿಂಗಳಿಗೋ ಒಮ್ಮೆ ಬಂದು ಹೋಗುತ್ತಿದ್ದ ಬಿಟ್ಟರೆ ಮನೆಯಲ್ಲಿ ಉಳಿದುಕೊಳ್ಳುತ್ತಿರಲಿಲ್ಲ. ಎರಡು ಮಕ್ಕಳೊಡನೆ ಹೆಂಡತಿ ರಾತ್ರಿ ಒಬ್ಬಳೇ ಆಗುತ್ತಾಳೆಂದು ಸಂಜೆಯೇ ಹೊರಟುಬಿಡುತ್ತಿದ್ದ. ಮೊಮ್ಮಕ್ಕಳನ್ನು ಬರೀ ಫೋಟೋದಲ್ಲಿ ನೋಡಿದ್ದಷ್ಟೇ. ದೊಡ್ಡವನು ಆರು